ಶಿಕ್ಷಕರು ಎಂಥವರಾಗಿರಬೇಕೆಂಬ ಸಮಾಜದ ನಿರೀಕ್ಷೆಗಳಿಗೂ, ವಾಸ್ತವದಲ್ಲಿ ಶಿಕ್ಷಕರು ಅಂತಹ ನಿರೀಕ್ಷೆಗಳನ್ನು ತಲುಪುವಲ್ಲಿ ಯಾವ ಪ್ರಮಾಣದಲ್ಲಿ ಯಶಸ್ವಿಯಾದರು ಎನ್ನುವ ಸಂಗತಿಗೂ ನಡುವಿನ ಅಂತರ ನಿರಂತರವಾಗಿ ಮುಂದುವರೆದಿರುವುದು ಕಾಲಾತೀತ ಸತ್ಯವಾಗಿದೆ.

ಭಾರತದ ಎರಡು ಶತಮಾನಗಳ ಶೈಕ್ಷಣಿಕ ಚರಿತೆ

ಶಾಲೆಗಳಲ್ಲಿ ಶಿಕ್ಷಕರಾಗಬಯಸುವವರು ಎಂಥವರಾಗಿರಬೇಕು? ಅವರು ಯಾವ ಮಟ್ಟದ ವಿದ್ಯಾರ್ಹತೆಯನ್ನು ಗಳಿಸಿರಬೇಕು? ಎಂಥ ಗುಣ ಲಕ್ಷಣಗಳನ್ನು, ಮೌಲ್ಯಗಳನ್ನು ಮೈಗೂಡಿಸಿಕೊಂಡಿರಬೇಕು? ಶಿಕ್ಷಕರನ್ನು ರೂಪಿಸುವ ಸಾಂಸ್ಥಿಕ ವ್ಯವಸ್ಥೆ ಮತ್ತು ಒಟ್ಟಾರೆ ಶಿಕ್ಷಣದ ಗೊತ್ತುಗುರಿಗಳನ್ನು ಅರ್ಥೈಸಿಕೊಂಡು ಅದಕ್ಕೆ ಪೂರಕವಾಗಿ ಸ್ಪಂದಿಸಬೇಕಾದ ಶಿಕ್ಷಕ ಶಿಕ್ಷಣ ಸಂಸ್ಥೆಗಳ ಸ್ವರೂಪ ಮತ್ತು ಪ್ರಕ್ರಿಯೆಗಳು ಹೇಗಿರಬೇಕು? ಈ ಗಹನ ಮತ್ತು ಸಂಕೀರ್ಣ ಪ್ರಶ್ನೆಗಳು ಇಂದು ನಿನ್ನೆಯವಲ್ಲ.

ಈ ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳಲು ನಮ್ಮ ದೇಶದ ಶಿಕ್ಷಕ ಶಿಕ್ಷಣ ವ್ಯವಸ್ಥೆಯು ಕಳೆದ ಇನ್ನೂರು ವರ್ಷಗಳಲ್ಲಿ ಹೇಗೆ ಬೆಳೆದು ಬಂದಿದೆ ಎನ್ನುವುದರತ್ತ ದೃಷ್ಟಿ ಹರಿಸುವ ಅಗತ್ಯವಿದೆ. ಅಲ್ಲದೆ ಹತ್ತೊಂಬತ್ತನೇ ಶತಮಾನದ ಆರಂಭದಿಂದ ಪ್ರಸ್ತುತ ಅವಧಿಯವರೆಗೆ ಈ ನಿಟ್ಟಿನಲ್ಲಿ ಆದ ಪ್ರಮುಖ ಬದಲಾವಣೆಗಳನ್ನು ಗಮನಿಸುತ್ತ, ಅವುಗಳ ಹಿಂದಿನ ಆಶಯಗಳು ವಾಸ್ತವದಲ್ಲಿ ಈಡೇರಿವೆಯೇ ಎನ್ನುವುದನ್ನು ಪರ್ಯಾಲೋಚಿಸುವ ಪ್ರಯತ್ನವನ್ನು ಈ ಲೇಖನ ಮಾಡುತ್ತದೆ.

ಶಿಕ್ಷಕನ ಅರ್ಹತೆಯನ್ನು ಕುರಿತು ಅವಲೋಕಿಸುವ ಮುನ್ನ ಶಿಕ್ಷಣದ ಮೂಲ ಉದ್ದೇಶವೇನು ಎಂಬುದನ್ನು ನಿರ್ಣಯಿಸುವುದು ಮುಖ್ಯವಾಗುತ್ತದೆ. ಇದಕ್ಕೆ ಡಾ.ಕೆ.ಶಿವರಾಮ ಕಾರಂತರ ಜಿಜ್ಞಾಸೆಯು ಪೀಠಿಕೆಯನ್ನು ಒದಗಿಸಬಲ್ಲದು.

ಶಿಕ್ಷಣದ ಗುರಿ ಓದು–ಬರಹವೇ?

ಯಾರಾದರೂ ಒಬ್ಬನಿಗೆ ಕೆಲವು ವರ್ಷ ಕನ್ನಡ ಭಾಷೆಯ ಶಿಕ್ಷಣ ದೊರೆಯಿತೆಂದರೆ ಅವನು ತಾನು ಒಬ್ಬ ಉಪಾಧ್ಯಾಯನಾಗಲು ತಕ್ಕವನಿರುವೆನು ಎಂದು ತಿಳಿಯುವನು. ಈಗ ಸಾಮಾನ್ಯವಾಗಿ ಉಪಾಧ್ಯಾಯರಾಗಿರುವವರೂ ಅಂಥವರೇ. ಮನುಷ್ಯನು ಅಪಾರವಾದ ಮಾನವ ಕುಟುಂಬದ ಒಂದು ಅಣುವು. ಅವನ ಸುಖ–ದುಃಖಗಳು ಈ ಕುಟುಂಬದ ಸುಖ–ದುಃಖಗಳನ್ನು ಅವಲಂಬಿಸಿವೆ. ಯಾರು ಈ ಮಾನವ ಸಮಾಜದ ಲಹರಿಯನ್ನು ತಿಳಿದು ಅದರ ಹಿತಕ್ಕೆ ಸರಿಯಾಗಿ ತನ್ನ ಹಿತವನ್ನೂ ಸೇರಿಸಿ ವರ್ತಿಸಬಲ್ಲನೋ, ಅವನು ಸುಖಿಯಾಗಬಲ್ಲನು. ಹಾಗಿದ್ದ ಬಳಿಕ, ಮನುಷ್ಯನನ್ನು ಸಮಾಜದಲ್ಲಿ ಸರಿಸೇರಿ ಬೆರೆತು ಆನಂದಿಸಲು ತಿದ್ದುವ ವ್ಯವಸ್ಥೆಯೇ ಶಿಕ್ಷಣವು. ಯಾವುದೇ ಕ್ರಮದಿಂದ ಅದು ಅವನನ್ನು ಮಾನವ ಸಮಾಜಕ್ಕೆ ಉಪಯುಕ್ತನನ್ನಾಗಿ ಮಾಡುವುದೋ ಆಗ ಅದು ತನ್ನ ಕೆಲಸವನ್ನು ಪೂರೈಸಿದಂತಾಗುವುದು.

ಜ್ಞಾನವನ್ನು ವಿಕಾಸಗೊಳಿಸುವ ಬಗೆ: ಭಿನ್ನಭಿನ್ನವಾದ ಸ್ವಭಾವ ಹೊಂದಿರುವ ಮಕ್ಕಳ ಜೊತೆ ವ್ಯವಹರಿಸಬೇಕಾದ ಶಿಕ್ಷಕನು 'ತಾನು ಕಲಿಸುವವನು' ಎಂಬ ಹೆಚ್ಚುಗಾರಿಕೆಯ ಭಾವನೆ ಹೊಂದಿರಬಾರದು. ಬದಲಿಗೆ, ಮಕ್ಕಳ ಸ್ವಭಾವ ಏನು ಎಂಬುದನ್ನು ಗೊತ್ತುಹಚ್ಚುವುದನ್ನು ಕಲಿಯಬೇಕು.

ಯಾರು ಶಿಕ್ಷಕನಾಗಲು ಬಯಸಬೇಕು?

ಶಿಕ್ಷಣವು ಎಂಥ ವಿಷಯವೆಂದರಿತ ನಾವು, ಆ ಉದ್ದೇಶಕ್ಕೆ ಎಂಥವರನ್ನು ಆರಿಸಬೇಕೆಂದು ಅಥವಾ ಯಾರು ಶಿಕ್ಷಕರಾಗಲು ಬರುವರು ಎಂದು ವಿಚಾರಿಸುವ. ಈಗಿನ ದಿನಗಳಲ್ಲಿ ಬಿ.ಎ. ಆದ ಯಾವನೋ ಹೈಸ್ಕೂಲು ಉಪಾಧ್ಯಾಯ ಆಗಬಹುದು. ಎಂಟನೇ ತರಗತಿ ಪಾಸಾದ ('ಈಗ ಪಿ.ಯು.ಸಿ ತರಗತಿ' – ಡಾ.ಕೆ.ಶಿವರಾಮ ಕಾರಂತ.[1]) ಯಾವನೋ ಪ್ರಾಥಮಿಕ ಶಾಲೆಗಳ ಉಪಾಧ್ಯಾಯನೆನಿಸಬಹುದು. ಇಂಥದೊಂದು

1. ಲೇಖನದ ಅವಧಿ 1932.

ಪದವಿಯ ಪ್ರಶಸ್ತಿ ದೊರೆಯುತ್ತದೆಂದರೆ ಶಿಕ್ಷಣಕ್ಕೆ ಅರ್ಹತೆಯು ಬರುವುದೇ?

ಈಗ ಉಪಾಧ್ಯಾಯ ವೃತ್ತಿಗೆ ಬರುವವರೆಲ್ಲ ಎಂಥವರು? ಏನಾದರೊಂದು ಪರೀಕ್ಷೆಯಾಗಿ ತನ್ನ ಜೀವನ ನಿರ್ವಾಹಕ್ಕೊಂದು ದಾರಿ ಎಂದು ತಿಳಿಯುವವರು. ಜೀವನದ ಉಪಾಯವು ಎಲ್ಲರಿಗೂ ಬೇಕಾದುದೇ. ಆದರೆ ಉಪಾಧ್ಯಾಯ ವೃತ್ತಿಯನ್ನು ಅದಕ್ಕಾಗಿ ಎಂದೂ ಕೈಗೊಳ್ಳಬಾರದು. ಅವನ ಕೈಯಲ್ಲಿ ನೂರಾರು ಹಸುಳೆಗಳು ತಮ್ಮ ಭವಿಷ್ಯವನ್ನಿರಿಸುವರು. ಅವನು ಅವರಿಗೆ ಸರಿಯಾದ ಮಾರ್ಗದರ್ಶಕನಾಗದೆ ಹೋದರೆ ಅವರ ಜನ್ಮವೇ ವ್ಯರ್ಥವಾಯಿತು. ಒಬ್ಬನ ಹೊಟ್ಟೆ ತುಂಬಬೇಕೆಂದು ನೂರಾರು ಮಕ್ಕಳ ಜೀವನದ ಉಪಾಯವನ್ನೋ, ಸುಖದ ಹಾದಿಯನ್ನೋ ನಾವು ತಡೆಯಲು ಬಾರದು. ಶಿಕ್ಷಕನೆನಿಸುವವನಿಗೆ ಅದಕ್ಕೆ ತಕ್ಕ ಲಕ್ಷಣಗಳಿರಬೇಕು. ಅವನು ಶಾಲಾ ಪಾಠಗಳಲ್ಲಿ ಬುದ್ಧಿವಂತನಾದರೆ ಸಾಲದು. ಮಕ್ಕಳ ನಡತೆಗೆ ಒಂದು ರೂಪವನ್ನು ಕೊಡಬಲ್ಲವನಾಗಬೇಕು. ಅಂಥ ಗುಣಗಳೆಲ್ಲ ಅವನಲ್ಲಿರಬೇಕು. ಒಬ್ಬನಿಂದ ನೂರಾರು ಜನರು ಮೇಲಕ್ಕೆ ಬರುವಂತೆ ಅವನ ಜೀವನದ ಆದರ್ಶವಿರಬೇಕು. ತಾನು ತಪ್ಪಿ ಬಿದ್ದರೆ ತನ್ನ ಹಾದಿಯನ್ನು ಅವರೂ ಹಿಡಿದಾರು ಎಂಬ ಭೀತಿಯು ಅವನಲ್ಲಿರಬೇಕು.[2]

ಬೇರೆ ಬೇರೆ ಮಕ್ಕಳ ಬೆಳವಣಿಗೆಯು ಹೇಗೆ ಸಾಗುವುದು, ಅವರ ಜೀವನದ ಆಸೆ, ಉತ್ಸಾಹಗಳು ಯಾವ ರೀತಿಯಲ್ಲಿ ಹರಿಯುತ್ತವೆ ಎಂದು ನಿರೀಕ್ಷಿಸುವ ತಾಳ್ಮೆಯು ಅವನಿಗೆ ಬೇಕು. ಅವರ ಮನೋಲಹರಿಗಳೊಡನೆ ಸಹಾನುಭೂತಿ ಯಿಂದ ಕೆಲಸ ಮಾಡುವ ತಾಳ್ಮೆಯೂ, ಶಾಂತ ಪ್ರಕೃತಿಯೂ ಅವನಿಗೆ ಇರಬೇಕು. ಎಲ್ಲ ಮಕ್ಕಳ ಸ್ವಭಾವಗಳಲ್ಲಿ ಒಂದೇ ರೀತಿಯ ಚುರುಕು ಕಾಣುವುದಿಲ್ಲವಾದ್ದರಿಂದ, ಒಂದೇ ಬಾರಿಗೆ ಎಲ್ಲರನ್ನೂ ಹಾದಿಗೆ ತರುವೆಯೆಂಬ ದುರಾಸೆಯೂ ಹೊಂದಿಲ್ಲ, ಅದು ಅಸಾಧ್ಯವಾದರೆ, ನಿರುತ್ಸಾಹವೂ ಅವನಲ್ಲಿ ಬರಬಾರದು.

ತಾನು ಶಿಕ್ಷಕನಲ್ಲ; ವಿದ್ಯಾರ್ಥಿ. ತಾನು ಕಲಿಯುವುದು ಮುಗಿದಿಲ್ಲ. ಶಿಕ್ಷಕ ವೃತ್ತಿಯೊಂದಿಗೆ ತನ್ನ ವಿದ್ಯಾಭ್ಯಾಸವು ತೊಡಗುತ್ತಿದೆ ಎಂಬ ಆತ್ಮಜ್ಞಾನವು ಮೊದಲಿಗೆ ಬೇಕು. ಹಣದ ಆಸೆಗಾಗಿ ತಾನು ಈ ವೃತ್ತಿಯನ್ನು ಮಾಡಬಾರದೆಂದು, ತನ್ನ ಕರ್ತವ್ಯವು ಮೇಲಾಫೀಸರರ ಪ್ರಶಂಸೆಯನ್ನಾಗಲಿ, ಸಂಬಳದ ಏರಿಳಿತಗಳನ್ನಾಗಲಿ ಹೊಂದಿಲ್ಲವೆಂದು

2. ಡಾ.ಕೆ.ಶಿವರಾಮ ಕಾರಂತ, 'ಆದರ್ಶ ಶಿಕ್ಷಕ ಮತ್ತು ಶಿಕ್ಷಕನ ಆದರ್ಶ – ಚಿಣ್ಣರ ಲೋಕದಲ್ಲಿ ಕಾರಂತರು', ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಜನವರಿ 2013

ತಿಳಿಯಬೇಕು. ಮಕ್ಕಳೊಡನೆ ಬೆರೆತು ಪ್ರೀತಿಯಿಂದ ಒಂದಾಗಬಲ್ಲ ಎಳೆ ಹೃದಯವು ಅವನಿಗೆ ಬೇಕು. ತಾನೂ ಒಂದು ಮಗು, ಎಷ್ಟಕ್ಕೂ ಮಕ್ಕಳಿಂದ ಶ್ರೇಷ್ಠನಲ್ಲ. ಅವರೂ ತನ್ನಂತೆ, ತಾನೂ ಅವರಂತೆ ಎಂಬ ಆತ್ಮೀಯತೆಯೂ ಬೇಕು.

ಭಾರತವು ಬ್ರಿಟಿಷ್ ಸಾಮ್ರಾಜ್ಯದ ಆಡಳಿತಕ್ಕೊಳಪಟ್ಟಿದ್ದ ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ, ಶಿಕ್ಷಣ ರಂಗಕ್ಕೆ ಅಂದಿನ ಪ್ರಭುತ್ವವು ಎಂತಹ ಮಹತ್ವವನ್ನು ಕೊಟ್ಟಿತು ಎನ್ನುವುದು, ತನ್ನ ವಸಾಹತುಶಾಹಿ ನೀತಿಯ ಗುರಿ ಉದ್ದೇಶಗಳ ಈಡೇರಿಕೆಗೆ ಭಾರತದ ಸಾಮಾಜಿಕ–ಆರ್ಥಿಕ ಸಂರಚನೆಯು ಹೇಗೆ ಅಧೀನವಾಗಿರಬೇಕೆನ್ನುವ ಸಂಕುಚಿತ ಕಲ್ಪನೆಯನ್ನು ಅವಲಂಬಿಸಿತ್ತು. ಇತಿಹಾಸಜ್ಞೆ ಅಪರ್ಣಾ ಬಸುರವರ ಟಿಪ್ಪಣಿ ಈ ಸಂಗತಿಗೆ ಪುಷ್ಟಿಯನ್ನೊದಗಿಸುತ್ತದೆ.

‘ಈಸ್ಟ್ ಇಂಡಿಯಾ ಕಂಪೆನಿಯ ಪ್ರಮುಖ ಉದ್ದೇಶ ವ್ಯಾಪಾರವೇ ಆಗಿದ್ದರಿಂದ ಅದು ಶಿಕ್ಷಣ ವ್ಯವಸ್ಥೆಯ ಬೆಳವಣಿಗೆಯಲ್ಲಿ ಯಾವುದೇ ಆಸಕ್ತಿಯನ್ನು ತಳೆಯದಿದ್ದುದು ಆಶ್ಚರ್ಯಕರ ಸಂಗತಿಯೇನಲ್ಲ. 1813ರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ಮೊದಲ ಬಾರಿ ನಿರ್ಣಯ ಕೈಗೊಂಡು, ಭಾರತದಲ್ಲಿನ ಶಿಕ್ಷಣಕ್ಕಾಗಿ ಕಾನೂನಾತ್ಮಕವಾಗಿ ಕಂಪೆನಿಯ ಸನ್ನದ್ದಿನಲ್ಲಿ ಗವರ್ನರ್ ಜನರಲ್‌ರವರು ಕನಿಷ್ಠ ಒಂದು ಲಕ್ಷ ರೂಪಾಯಿಗಳನ್ನು ಮೀಸಲಿರಿಸಬೇಕು ಎಂದಿತು. ನಂತರ ಎರಡನೇ ಮುಖ್ಯ ಬೆಳವಣಿಗೆಯಾದದ್ದು 1835ರ ಫೆಬ್ರವರಿಯಲ್ಲಿ. ಆಗ ಕಾನೂನು ಸದಸ್ಯನೂ, ಸಾರ್ವಜನಿಕ ಶಿಕ್ಷಣದ ಸಾಮಾನ್ಯ ಸಮಿತಿಯ ಅಧ್ಯಕ್ಷನೂ ಆಗಿದ್ದ ಮೆಕಾಲೆಯನ್ನು ಶಿಕ್ಷಣ ವ್ಯವಸ್ಥೆಯ ಬಗ್ಗೆ ಅಭಿಪ್ರಾಯ ನೀಡುವಂತೆ ಬ್ರಿಟಿಷ್ ಸರ್ಕಾರ ಕೇಳಿದಾಗ ಆತ ಇಡೀ ಶಿಕ್ಷಣದ ಸಮಸ್ಯೆಯನ್ನು ಭಾಷಾ ಮಾಧ್ಯಮಕ್ಕೆ ಸೀಮಿತಗೊಳಿಸಿ ದೇಶೀಯ ಭಾಷೆಗಳಾದ ಅರೇಬಿಕ್, ಸಂಸ್ಕೃತ ಮುಂತಾದ ಮಾತೃಭಾಷೆಯ ಬದಲಿಗೆ ಕೆಲವೇ ಸಂಖ್ಯೆಯ ಮೇಲ್ವರ್ಗದ ಜನರಿಗೆ ಪ್ರೌಢ ಮತ್ತು ಉನ್ನತ ಶಿಕ್ಷಣದ ಹಂತದಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಜಾರಿಗೊಳಿಸಿ ಸರ್ಕಾರದ ಅನುದಾನವನ್ನು ಅಂತಹ ಶಾಲೆಗಳಿಗೆ ಮಾತ್ರ ನೀಡಬೇಕೆಂದು ಶಿಫಾರಸು ಮಾಡಿದನು. ತದನಂತರದ ಬೆಳವಣಿಗೆಯೆಂದರೆ 1854ರಲ್ಲಿ ಭಾರತದಲ್ಲಿನ ಶಿಕ್ಷಣದ ಸ್ಥಿತಿಗತಿಗಳ ಬಗ್ಗೆ ಸರ್ವೇಕ್ಷಣೆ ಮಾಡಿ ವರದಿ ನೀಡಲು ಸರ್. ಚಾರ್ಲ್ಸ್ ವುಡ್ ಅಧ್ಯಕ್ಷತೆಯಲ್ಲಿ ನೇಮಿಸಲಾದ ಶಿಕ್ಷಣ ಆಯೋಗ.’

ಅದರಂತೆ ವುಡ್ ಸಮಿತಿಯು ಎಲ್ಲ ವರ್ಗದ ಜನರು ಶಿಕ್ಷಣ ಪಡೆಯಲು ಪೂರಕವಾಗಿ ಶಿಕ್ಷಣ ಕ್ಷೇತ್ರವನ್ನು ಸಾರ್ವತ್ರೀಕರಣಗೊಳಿಸುವುದು, ಜನರಿಗೆ

ಪ್ರಾದೇಶಿಕ ಭಾಷೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು, ಎಲ್ಲ ಪ್ರಾಂತ್ಯಗಳಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಗಳು ಮತ್ತು ಶಿಕ್ಷಕರ ತರಬೇತಿ ಶಾಲೆಗಳ ಸ್ಥಾಪನೆ, ಶಾಲೆಯಿಂದ ವಿಶ್ವವಿದ್ಯಾಲಯ ಹಂತದವರೆಗೆ ಶಿಕ್ಷಣ ವ್ಯವಸ್ಥೆಯ ಪರಿಕಲ್ಪನೆ ಮುಂತಾದ ಮಹತ್ವದ ಶಿಫಾರಸುಗಳನ್ನು ಒಳಗೊಂಡು ಭವಿಷ್ಯದ ಶಿಕ್ಷಣಕ್ಷೇತ್ರದ ರೂಪುರೇಷೆಗೆ ಅಡಿಪಾಯ ಹಾಕಿತು. ಆದರೂ, ಶಿಕ್ಷಣ ಕ್ಷೇತ್ರದಲ್ಲಿನ ಬದಲಾವಣೆಗಳು ವಾಸ್ತವದಲ್ಲಿ ಮಂದಗತಿಯಲ್ಲೇ ಜಾರಿಯಾದವು.

> ‘ಈ ಮೇಲಿನ ಸಮಿತಿಗಳ ಮುಖ್ಯ ನಿಲುವುಗಳನ್ನೇ ಬ್ರಿಟಿಷ್ ಸರ್ಕಾರ ತನ್ನ ಶಿಕ್ಷಣ ನೀತಿಗಳಲ್ಲಿ 1947ರ ತನಕ ಅನುಸರಿಸಿತು. ಇದರಿಂದ ಶಿಕ್ಷಣಕ್ಕೆ ಸರ್ಕಾರ ಮೀಸಲಿರಿಸಿದ ಮೊತ್ತ ಅತ್ಯಂತ ಕನಿಷ್ಠ ಪ್ರಮಾಣದ್ದಾಗಿತ್ತು. ಕಡಿಮೆ ಸಿಬ್ಬಂದಿ, ಆಡಳಿತಾತ್ಮಕ ಅಗತ್ಯಗಳನ್ನು ಪೂರೈಸದಿದ್ದುದು, ಸಾಮಾನ್ಯ ಜನರು ಬಹುವಿಧದ ಭಾಷೆಗಳಲ್ಲಿ ಶಿಕ್ಷಿತರಾಗಲು ಒತ್ತಾಸೆ ನೀಡದಿದ್ದುದು ಭಾರತದ ಸಮಗ್ರ ಅಭಿವೃದ್ಧಿಯ ಕುರಿತಾಗಿ ಬ್ರಿಟಿಷರು ತಳೆದ ಅವಜ್ಞೆಯ ದೃಷ್ಟಿಕೋನಕ್ಕೆ ಕನ್ನಡಿ ಹಿಡಿದಂತಿತ್ತು.
>
> ಇವೆಲ್ಲದರ ಪರಿಣಾಮವಾಗಿ ಶಾಲೆಗಳಲ್ಲಿ ತರಬೇತಿ ಹೊಂದಿದ ಶಿಕ್ಷಕರ ಕೊರತೆ ತೀವ್ರವಾಗಿದ್ದರಿಂದ ಬೋಧನೆಯ ಗುಣಮಟ್ಟ ಮತ್ತಷ್ಟು ಕುಸಿಯಿತು. 1936–37ರಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ತರಬೇತಿ ಪಡೆದ ಪುರುಷ ಶಿಕ್ಷಕರ ಪ್ರಮಾಣ ಶೇ. 57ರಷ್ಟಿತ್ತು. ಅದರಲ್ಲಿ ಕೇವಲ ಶೇ. 23ರಷ್ಟು ಶಿಕ್ಷಕರು ಸ್ನಾತಕ ಪದವಿ ಹಂತದವರೆಗೆ ವಿದ್ಯಾರ್ಹತೆ ಗಳಿಸಿದ್ದರು. ತರಬೇತಿ ಪಡೆದು ಬಂದ ಶಿಕ್ಷಕರ ಕ್ಷಮತೆಯೂ ಅಷ್ಟಕ್ಕಷ್ಟೇ ಎನ್ನುವಂತಿತ್ತು. ಅವರ ಸಂಬಳದ ಪ್ರಮಾಣವೂ ನಿಕೃಷ್ಟ ಮಟ್ಟದ್ದಾಗಿದ್ದರಿಂದ ಸರ್ಕಾರಿ ಸೇವೆಗೆ ಅರ್ಹತೆ ಪಡೆಯದ ಅಥವಾ ಕಾನೂನು ವೃತ್ತಿಗೆ ಪ್ರವೇಶಿಸಲಾರದವರು ಮಾತ್ರ ಶಿಕ್ಷಕರಾಗಲು ಮುಂದೆ ಬಂದರು. ಇಂತಹ ಬೆಳವಣಿಗೆಗಳಿಂದ ಎರಡನೇ ಮಹಾಯುದ್ಧದ ವೇಳೆಗೆ ಅರ್ಹ ವಯೋಮಾನದ ಮಕ್ಕಳಲ್ಲಿ ಕೇವಲ ಶೇ. 31ರಷ್ಟು ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಗಳಲ್ಲಿ ದಾಖಲಾಗಿದ್ದರು. ಮುಂದುವರೆದ ದೇಶಗಳಲ್ಲಿ ಈ ಪ್ರಮಾಣ ಅದಾಗಲೇ ಶೇ. 100ರಷ್ಟಿತ್ತು.’[3]

ಬ್ರಿಟಿಷ್ ಸರ್ಕಾರವು ಹೀಗೆ ಶಿಕ್ಷಣ ಕ್ಷೇತ್ರವನ್ನು, ಶಿಕ್ಷಕರ ಸಿದ್ಧತೆಯ ವ್ಯವಸ್ಥೆಯನ್ನು ಕಡೆಗಣಿಸಿದ್ದಕ್ಕೆ ಇನ್ನೊಂದು ಪುರಾವೆಯನ್ನು ಹೆಣ್ಣು ಮಕ್ಕಳಿಗೆ

3. Basu, Aparna, ‘The Origins and Operations of the Indian Education System, 1757-1947’, in Essays in the History of Indian education, New Delhi, Concept Publishing Company, 1982.

ಮೊದಲ ಶಾಲೆಯನ್ನು ಆರಂಭಿಸಿದ, ಹತ್ತೊಂಬತ್ತನೇ ಶತಮಾನದ ಸಮಾಜ ಸುಧಾರಕ, ಜೋತಿರಾವ್ ಫುಲೆ ಒದಗಿಸುತ್ತಾರೆ.

"ಪೂನಾ ಪ್ರಾಂತ್ಯದಲ್ಲಿ ಅಸ್ತಿತ್ವದಲ್ಲಿರುವ ಕೆಲವು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಶಿಕ್ಷಣದ ಮಟ್ಟವು ನಾನು ಗಮನಿಸಿದಂತೆ ಸಮಾಧಾನಕರ ಅಥವಾ ಸುಸ್ಥಿತಿಯಲ್ಲಿದೆಯೆಂದು ನನಗನಿಸುವುದಿಲ್ಲ. ಈ ಪ್ರಾಂತ್ಯದಲ್ಲಿ ಸಾಮಾನ್ಯ ಜನರಿಗೆ ಒದಗಿಸುತ್ತಿರುವ ಪ್ರಾಥಮಿಕ ಶಿಕ್ಷಣವನ್ನು ಕಡೆಗಣಿಸಲಾಗಿದೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ವಿದ್ಯಾರ್ಥಿಗಳು ಯಾವುದೇ ವೃತ್ತಿಯನ್ನು ರೂಢಿಸಿಕೊಂಡು ತಮ್ಮ ಭವಿಷ್ಯವನ್ನು ಕಟ್ಟಿಕೊಳ್ಳುವುದಕ್ಕೆ ಉಪಯುಕ್ತವಾಗಿಯಾಗಲಿ ಪ್ರಾಯೋಗಿಕವಾಗಿಯಾಗಲಿ ಅವರನ್ನು ಅಣಿಗೊಳಿಸದ ಕಾರಣ ಶಿಕ್ಷಣ ವ್ಯವಸ್ಥೆಯು ದೋಷಪೂರಿತವಾಗಿದೆ. ಜನಜೀವನದ ಹಿತದೃಷ್ಟಿಯಿಂದ ಸಮುದಾಯದ ಅಗತ್ಯಕ್ಕೆ ಸ್ಪಂದಿಸುವ ರೀತಿಯಲ್ಲಿ ಮುಂದಿನ ದಿನಗಳಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುವುದು ಉಪಯುಕ್ತ ಕ್ರಮವಾದೀತು. ಇದಕ್ಕಾಗಿ ಶಿಕ್ಷಕರನ್ನು ತಯಾರು ಮಾಡುವ ವ್ಯವಸ್ಥೆ ಮತ್ತು ಈಗ ಅನುಸರಿಸುತ್ತಿರುವ ಪಠ್ಯಕ್ರಮವನ್ನು ಆಮೂಲಾಗ್ರವಾಗಿ ಮರುವಿನ್ಯಾಸಗೊಳಿಸಬೇಕು".

– ಹೀಗೆಂದು 1882ರಲ್ಲಿ ಅಭಿಪ್ರಾಯ ಪಟ್ಟವರು ಜೋತಿರಾವ್ ಫುಲೆ.[4]

ಮುಂದುವರೆದಂತೆ ಅವರು,

'ಪ್ರಾಥಮಿಕ ಶಾಲೆಗಳಲ್ಲಿ ನೇಮಕಗೊಂಡಿರುವ ಬಹುತೇಕ ಶಿಕ್ಷಕರು ಯಾವುದೇ ತರಬೇತಿಯನ್ನು ಹೊಂದಿರುವುದಿಲ್ಲ. ಅವರಲ್ಲಿ ಕೆಲವೇ ಕೆಲವು ಮಂದಿ ನಾರ್ಮಲ್ ತರಬೇತಿ ಶಾಲೆ[5]ಯಿಂದ ಹೊರಬಂದಿದ್ದಾರೆ.... ಪ್ರಾಥಮಿಕ ಶಾಲೆಗಳಲ್ಲಿ ಕಲಿಸುವ ಶಿಕ್ಷಕರು ಸರಿಯಾದ ತರಬೇತಿ ಪಡೆದವರೇ ಆಗಿರುವುದು ಸೂಕ್ತ. ಅಲ್ಲದೆ, ತರಬೇತಿ ಪಡೆಯದೆ

---

4. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಸುಧಾರಣೆಯನ್ನು ಕುರಿತು ನೇಮಿಸಲಾದ ಶಿಕ್ಷಣ ಆಯೋಗದ ಮಾಹಿತಿಗಾಗಿ ಅಂದಿನ ಪೂನಾ ಪ್ರಾಂತ್ಯದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಅಸ್ತಿತ್ವದಲ್ಲಿದ್ದ ಶಿಕ್ಷಣದ ಸ್ಥಿತಿಗತಿಗಳನ್ನು ಕುರಿತು ತಾವು ಕಂಡಂತೆ ಜೋತಿರಾವ್ ಫುಲೆ ಅವರು ಅಕ್ಟೋಬರ್ 19, 1882ರಂದು ನೀಡಿದ ಲಿಖಿತ ಹೇಳಿಕೆಯ ಭಾಗ.

5. 'ನಾರ್ಮಲ್ ಶಾಲೆ'ಯೆಂದರೆ ಶಿಕ್ಷಕರ ತರಬೇತಿ ಶಾಲೆ. ಭಾರತದಲ್ಲಿ ಪ್ರಪ್ರಥಮವಾಗಿ 1793ರಲ್ಲಿ ಆಗಿನ ಬೆಂಗಾಲದ ಸೇರಾಂಪುರದಲ್ಲಿ ಇಂತಹ ಶಾಲೆ ಆರಂಭವಾಯಿತು. ಇದಕ್ಕೆ ಮೊದಲು ಅಮೆರಿಕ, ಕೆನಡಾ, ಯೂರೋಪಿನ ಹಲವು ದೇಶಗಳಲ್ಲಿ ಇಂತಹ ಶಾಲೆಗಳು ಆರಂಭಗೊಂಡು ನಂತರ ಇವೇ ಶಿಕ್ಷಕರ ತರಬೇತಿ ಸಂಸ್ಥೆಗಳಾಗಿ ರೂಪುಗೊಂಡವು.

ಇರುವವರಲ್ಲಿ, ದಕ್ಷರಾದವರನ್ನು ಹೊರತುಪಡಿಸಿ, ಉಳಿದಂತೆ ತರಬೇತಿ ಹೊಂದಿದವರನ್ನೇ ನೇಮಿಸಿಕೊಳ್ಳಬೇಕಾಗುತ್ತದೆ. ಸಮರ್ಥ ಶಿಕ್ಷಕರನ್ನು ಆಯ್ಕೆ ಮಾಡಿಕೊಂಡು ಅವರ ಸ್ಥಿತಿಗತಿಗಳನ್ನು ಸುಧಾರಿಸಲು ಅವರ ಸಂಬಳವನ್ನು ಹನ್ನೆರಡು ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ, ದೊಡ್ಡ ಗ್ರಾಮಗಳಲ್ಲಿ ಇದು ಕನಿಷ್ಠ ಹದಿನೈದರಿಂದ ಇಪ್ಪತ್ತು ರೂಪಾಯಿಗಳಿರುವಂತೆ ನೋಡಿಕೊಳ್ಳಬೇಕು.'

'ನಗರ, ಪಟ್ಟಣ ಪ್ರದೇಶಗಳು ಮತ್ತು ದೊಡ್ಡ ಹಳ್ಳಿಗಳಲ್ಲಿರುವ ದೇಶೀಯ ಶಾಲೆಗಳಲ್ಲಿ ಕಲಿಸುವ ಈಗಿನ ಶಿಕ್ಷಕರು ಹಳ್ಳಿಯ ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ. ಅಲ್ಲಿ ಕಲಿಯುವ ಹುಡುಗರು ಬಾಯಿ ಪಾಠದ ಮಗ್ಗಿ, ಸ್ವಲ್ಪ ಮಟ್ಟಿನ ಮೋಡಿ ಲಿಪಿ[6]ಯಲ್ಲಿ ಬರವಣಿಗೆ ಮತ್ತು ಓದುವುದು ಹಾಗೂ ಕೆಲವು ಧಾರ್ಮಿಕ ಮಂತ್ರಗಳನ್ನು ಪಠಿಸುವುದನ್ನು ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದಾರೆ. ಸಾಮಾನ್ಯವಾಗಿ ಬೋಧನೆಯ ಕಲೆಯಲ್ಲಿ ಪ್ರವೇಶಿಕೆ ಇಲ್ಲದ ಕಾರಣ, ಶಿಕ್ಷಕರು ಇದನ್ನು ಮೀರಿ ಯಾವುದೇ ಸುಧಾರಣೆ ತರಲು ಅಸಮರ್ಥರಾಗಿದ್ದಾರೆ. ಅತ್ಯಧಿಕ ಸಂಖ್ಯೆಯ ಶಿಕ್ಷಕರು ಬ್ರಾಹ್ಮಣ ಸಮಾಜದಿಂದ ಬಂದವರಾಗಿದ್ದು ಅವರು ಗಳಿಸಿದ ವಿದ್ಯೆಯಿಂದಾಗಿ ಕಷ್ಟಪಟ್ಟು ಮರಾಠಿಯನ್ನು ಓದಿ, ಬರೆಯಲು ಮತ್ತು ಮೂಲ ಲೆಕ್ಕಗಳನ್ನು ಮಾಡಲು ಹೆಣಗಾಡುತ್ತಿದ್ದಾರೆ. ಜೀವನದಲ್ಲಿ ಬೇರೆ ಏನನ್ನೂ ಮಾಡಲು ಸಮರ್ಥರಲ್ಲದವರು ಕಡೆಯ ಆಯ್ಕೆಯಾಗಿ ಶಿಕ್ಷಕರ ಕಸುಬಿಗೆ ಬರುತ್ತಾರೆ. ಇಂತಹ ಶಾಲೆಗಳಿಗೆ ಸಮರ್ಥರಾದ ಶಿಕ್ಷಕರನ್ನು ಸಜ್ಜುಗೊಳಿಸಲು ದೇಶದಲ್ಲಿ ಯಾವ ವ್ಯವಸ್ಥೆಯೂ ಇಲ್ಲ. ಈಗಿನ ಶಿಕ್ಷಕರ ಬದಲಾಗಿ ಪ್ರಾದೇಶಿಕ ಭಾಷೆಗಳಲ್ಲಿ ತರಬೇತಿ ಕಾಲೇಜುಗಳಿಂದ ಕನಿಷ್ಠ ಆರನೇ ತರಗತಿ ಓದಿದವರನ್ನು ನೇಮಿಸಿಕೊಳ್ಳದಿದ್ದರೆ ದೇಶೀಯ ಶಾಲೆಗಳ ಸ್ಥಿತಿ ಅಯೋಮಯವಾಗುತ್ತದೆ.'

1930 ಮತ್ತು 1940ರ ದಶಕಗಳು ಸ್ವಾತಂತ್ರ್ಯ ಸಂಗ್ರಾಮದ ಹೋರಾಟ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲ. ಅಂತಹ ಹೋರಾಟಗಳನ್ನು ಮುನ್ನಡೆಸುತ್ತಿದ್ದ ಗಾಂಧೀಜಿ ಮತ್ತು ಇತರ ನಾಯಕರು ಭವಿಷ್ಯದ ಭಾರತವನ್ನು ಕುರಿತಾದ

6. ಬಹುತೇಕ ಮರಾಠಿ ಭಾಷೆಯಲ್ಲಿನ ವ್ಯವಹಾರಗಳು ಮೋಡಿ ಲಿಪಿಯಲ್ಲೇ ನಡೆಯುತ್ತಿದ್ದು, ಸುಮಾರು 1940ರವರೆಗೆ ಲೆಕ್ಕ ಮಾಡುವುದೂ ಸೇರಿದಂತೆ ಮೋಡಿ ಲಿಪಿಯನ್ನು ಅಲ್ಲಿನ ಶಾಲೆಗಳಲ್ಲಿ ಕಲಿಸಲಾಗುತ್ತಿತ್ತು.

7. ಮೂಲ ರಾಷ್ಟ್ರೀಯ ಶಿಕ್ಷಣ ಕುರಿತ ಡಾ.ಜಾಕೀರ್ ಹುಸೇನ್ ಸಮಿತಿಯ ವರದಿ, ಡಿಸೆಂಬರ್ 2, 1937.

ಮಹತ್ತರ ಕನಸುಗಳಿಗೆ ನಿರ್ದಿಷ್ಟ ರೂಪವನ್ನು ನೀಡಲು ಪ್ರಯತ್ನಿಸುತ್ತಿದ್ದ ಕಾಲ. ಸ್ವತಂತ್ರ ಭಾರತದ ಮೂರನೇ ರಾಷ್ಟ್ರಪತಿಗಳೂ. ಪ್ರಮುಖ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರೂ ಆದ ಡಾ.ಜಾಕೀರ್ ಹುಸೇನ್, ಗಾಂಧೀಜಿಯವರ ನಿಲುವುಗಳಲ್ಲಿ ನಂಬಿಕೆಯಿಟ್ಟವರಲ್ಲಿ ಒಬ್ಬರಾಗಿದ್ದರು. ಶಿಕ್ಷಣ ರಂಗವನ್ನು ಕುರಿತು ಅವರ ಮುಂದಾಳತ್ವದಲ್ಲಿ ರಚಿಸಲಾದ ಸಮಿತಿಯು 1937ರಲ್ಲಿ ನೀಡಿದ ವರದಿಯು ಶಿಕ್ಷಕರ ವಿದ್ಯಾರ್ಹತೆಯನ್ನು ಕುರಿತು ಈ ರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸಿತು.[7]

> 1937ರ ವಾರ್ಧಾ ರಾಷ್ಟ್ರೀಯ ಶಿಕ್ಷಣ ಸಮ್ಮೇಳನದಲ್ಲಿ ನಿರ್ಣಯಿಸಿದಂತೆ ಆಗ ಜಾರಿಯಲ್ಲಿದ್ದ ಬ್ರಿಟಿಷ್ ಶಿಕ್ಷಣ ಪದ್ಧತಿಗೆ ಬದಲಾಗಿ ನಮ್ಮ ದೇಶದ ಸ್ಥಿತಿ–ಗತಿಗೆ ಪೂರಕವಾಗಿ ಗ್ರಾಮೀಣ ಬದುಕಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ಅದೇ ವರ್ಷ ಡಿಸೆಂಬರ್ 2ರಂದು ಡಾ.ಜಾಕೀರ್ ಹುಸೇನ್ ಸಮಿತಿಯು 'ಮೂಲ ರಾಷ್ಟ್ರೀಯ ಶಿಕ್ಷಣ' ಎಂತಲೂ ಕರೆಯಲಾದ ಮಹತ್ವದ ದಾಖಲೆಯನ್ನು ವರದಿಯ ರೂಪದಲ್ಲಿ ಸಲ್ಲಿಸಿತು. ಶಿಕ್ಷಕ ತರಬೇತಿಗೆ ಸಂಬಂಧಿಸಿದಂತೆ ಸಮಿತಿಯ ಶಿಫಾರಸುಗಳಲ್ಲಿ ಮುಖ್ಯವಾಗಿ, ಶೈಕ್ಷಣಿಕ ವಿಷಯಗಳಲ್ಲದೆ ಶಾಲೆಗಳಲ್ಲಿ ಕುಶಲ ಕೆಲಸಗಳ ಕುರಿತ ಪ್ರಕ್ರಿಯೆಗಳು ಮತ್ತು ತಂತ್ರಗಳನ್ನು ಅವರ ತರಬೇತಿಯಲ್ಲಿ ಸೇರ್ಪಡೆಗೊಳಿಸಬೇಕೆಂದು ಹೇಳಲಾಯಿತು. ಅಲ್ಲದೆ ಮೂರು ವರ್ಷದ ಶಿಕ್ಷಕ ತರಬೇತಿ ಕೋರ್ಸುಗಳಿಗೆ ಸೇರಲು ಕನಿಷ್ಠ ಅರ್ಹತೆಯಾಗಿ ಹತ್ತನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆ ಅಥವಾ ದೇಶೀಯ ಭಾಷೆಯೊಂದರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಎರಡು ವರ್ಷಗಳ ಬೋಧನಾ ಅನುಭವವಿರಬೇಕೆಂಬ ಶಿಫಾರಸನ್ನು ಮಾಡಲಾಯಿತು.
>
> ಆಯೋಗವು ಆಗಿನ ಶಿಕ್ಷಣ ಪದ್ಧತಿಯ ಬಗ್ಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ, ಸಮಾಜದ ಉಪಯುಕ್ತ ಉತ್ಪಾದಕ ಸದಸ್ಯರಾಗಿ ಮುಖ್ಯವಾಹಿನಿಯಲ್ಲಿ ತಮ್ಮ ಕೊಡುಗೆ ನೀಡಿ ಪರಿಣಾಮಕಾರಿಯಾಗಿ ಭಾಗವಹಿಸುವಂತೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲಾಗದಿರುವ ಬಗ್ಗೆ ಕಳವಳವನ್ನು ದಾಖಲಿಸಿತು.

1940ರ ದಶಕದಲ್ಲಿ ನಮ್ಮ ನಾಡಿನ ಶಾಲೆಗಳ, ಶಿಕ್ಷಕರ ದಾರುಣ ಸ್ಥಿತಿ–ಗತಿಗಳನ್ನು ಮನೋಜ್ಞವಾಗಿ ಚಿತ್ರಿಸಿರುವ ಕೃತಿ 'ರಂಗಣ್ಣನ ಕನಸಿನ ದಿನಗಳು'. ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ ಬಹುತೇಕ ಜನರು ಈ ಪುಸ್ತಕವನ್ನು ಓದಿರುತ್ತಾರೆ. ಪುಸ್ತಕದ ಮುನ್ನುಡಿಯಲ್ಲಿ ಲೇಖಕ ಎಂ.ಆರ್.ಶ್ರೀನಿವಾಸಮೂರ್ತಿ ಎಂಥವರು ಶಿಕ್ಷಕರಾಗಬೇಕು ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಾರೆ. 1949ರಲ್ಲಿ

ಪುಸ್ತಕದ ಮೊದಲ ಮುದ್ರಣಕ್ಕೆ ಬರೆದ ಮುನ್ನುಡಿಯ ಆಯ್ದ ಭಾಗವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

‘ಪಾಠಶಾಲೆಯೆಂಬ ಒಡಲಿಗೆ ಉಪಾಧ್ಯಾಯರೇ ಜೀವ. ಕ್ಷೀಣದೆಶೆಯಲ್ಲಿರುವ ಪಾಠಶಾಲೆಗೆ ದಕ್ಷರೂ ಶ್ರದ್ಧಾವಂತರೂ ಆದ ಉಪಾಧ್ಯಾಯರು ವರ್ಗವಾಗಿ ಹೋದರೆ ಅದನ್ನು ಒಂದು ವರ್ಷದೊಳಗಾಗಿ ಊರ್ಜಿತ ಮಾಡಿ, ಐವತ್ತು ಅರುವತ್ತು ಮಕ್ಕಳು ತುಂಬಿದ ಪಾಠಶಾಲೆಯಾಗಿ ಮಾಡುತ್ತಾರೆ; ಮತ್ತು ಗ್ರಾಮಸ್ಥರ ಗೌರವವನ್ನು ಸಂಪಾದಿಸಿ ಗಣ್ಯವ್ಯಕ್ತಿಗಳಾಗುತ್ತಾರೆ. ಉತ್ತಮ ಸ್ಥಿತಿಯಲ್ಲಿ ಇರುವ ಪಾಠಶಾಲೆಗೆ ಯೋಗ್ಯತೆಯಿಲ್ಲದ ಮತ್ತು ಶ್ರದ್ಧಾಹೀನರಾದ ಉಪಾಧ್ಯಾಯರು ಹೋದರೆ ಮೂರು ತಿಂಗಳಲ್ಲಿ ಅದನ್ನು ಕ್ಷೀಣದೆಶೆಗೆ ತಂದುಬಿಡುತ್ತಾರೆ. ಆದ್ದರಿಂದ ವಿದ್ಯಾಭ್ಯಾಸದ ಇಲಾಖೆಯಲ್ಲಿ ಯಾರು ಯಾರನ್ನೋ ಉಪಾಧ್ಯಾಯರನ್ನಾಗಿ ನೇಮಕ ಮಾಡುವುದು ಸರಿಯಲ್ಲ. ಮೊದಲನೆಯದಾಗಿ, ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿಯೂ ಟ್ರೈನಿಂಗ್ ಪರೀಕ್ಷೆಯಲ್ಲಿಯೂ ತೇರ್ಗಡೆಯಾದವರನ್ನು ಉಪಾಧ್ಯಾಯರನ್ನಾಗಿ ನೇಮಕ ಮಾಡಬೇಕು.’

‘ಈಗ ಪಾಠಶಾಲೆಗಳನ್ನು ಅಚ್ಚುಕಟ್ಟಾಗಿ ಸ್ಥಾಪಿಸುತ್ತಿದ್ದಾರೆ. ಅನೇಕ ಪಾಠಶಾಲೆಗಳಲ್ಲಿ ಉಪಾಧ್ಯಾಯರುಗಳಿಲ್ಲ; ಅಥವಾ ಅವರ ಸಂಖ್ಯೆ ಕಡಿಮೆ. ಟ್ರೈನಿಂಗ್ ಆಗಿಲ್ಲದವರನ್ನೆಲ್ಲ ಸೇರಿಸಿಕೊಂಡು ಅವರಿಗೆ ಯಾವುದೊಂದು ಅಲ್ಪಾವಧಿಯ ಶಿಕ್ಷಣವನ್ನೂ ಕೊಡದೆ ಉಪಾಧ್ಯಾಯರನ್ನಾಗಿ ಕಳಿಸುತ್ತಿದ್ದಾರೆ. ಅವರ ಸರ್ವಿಸ್ಸು ಅರ್ಧ ಮುಗಿಯುವ ಹೊತ್ತಿಗೋ ಏನೋ ಟ್ರೈನಿಂಗ್‌ಗೆ ಕಳಿಸಿಕೊಡುತ್ತಾರೆ. ಏತನ್ಮಧ್ಯೆ ಈ ಅನನುಭವಿಗಳು ತಮಗೆ ತೋರಿದಂತೆ ಪಾಠಗಳನ್ನು ಮಾಡುತ್ತಾರೆ. ಈ ದೋಷಗಳೆಲ್ಲ ನಿವಾರಣೆಯಾಗಬೇಕಾಗಿದೆ. ನಮಗೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ನಾರ್ಮಲ್ ಸ್ಕೂಲುಗಳು ಬೇಕು. ಎಸ್.ಎಸ್.ಎಲ್.ಸಿ. ಆದವರಿಗೆ ಸ್ಕಾಲರ್‌ಷಿಪ್ ಕೊಟ್ಟು ಒಂದು ವರ್ಷ ಕಾಲ ಆ ಪಾಠಶಾಲೆಗಳಲ್ಲಿ ಶಿಕ್ಷಣವನ್ನು ಒದಗಿಸಿ ಉಪಾಧ್ಯಾಯರನ್ನಾಗಿ ನೇಮಕ ಮಾಡುತ್ತ ಹೋಗಬೇಕು. ಪ್ರತಿ ವರ್ಷವೂ ಹೀಗೆ ಐನೂರು ಮಂದಿಯಾದರೂ ತರಬೇತಾಗಿ ಬರುತ್ತಿದ್ದರೆ ನಮ್ಮ ಪ್ರಾಥಮಿಕ ವಿದ್ಯಾಭ್ಯಾಸದ ಸಮಸ್ಯೆ ಬಹುಮಟ್ಟಿಗೆ ಬಗೆಹರಿದೀತು.’[8]

ಒಟ್ಟಾರೆ ಮೇಲಿನ ಶೈಕ್ಷಣಿಕ ಚರಿತೆಯ ಚಿತ್ರಣವನ್ನು ವಿಶ್ಲೇಷಿಸಿದಾಗ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ.

8. ಎಂ.ಆರ್. ಶ್ರೀನಿವಾಸಮೂರ್ತಿ, ‘ರಂಗಣ್ಣನ ಕನಸಿನ ದಿನಗಳು’ ಪುಸ್ತಕದ ಮೊದಲ ಮುದ್ರಣಕ್ಕೆ 1949ರಲ್ಲಿ ಬರೆದ ಮುನ್ನುಡಿಯ ಭಾಗ, ಆರನೆಯ ಮುದ್ರಣ, ಅಂಕಿತ ಪುಸ್ತಕ, 2009.

- ಆಯಾಕಾಲಕ್ಕೆ ತಕ್ಕಂತೆ ಶಿಕ್ಷಕರಾಗಲು ನಿಗದಿತ ವಿದ್ಯಾರ್ಹತೆ ಮತ್ತು ತರಬೇತಿ ಪ್ರಮಾಣವನ್ನು ನಿಶ್ಚಯಿಸಲಾಗಿದೆ.
- ಈ ಎರಡು ಪರಿಮಾಣಾತ್ಮಕ ಅಗತ್ಯತೆಗಳನ್ನು ಮೀರಿ ಶಿಕ್ಷಕರು ರೂಢಿಸಿಕೊಳ್ಳಬೇಕಾದ ಗುಣಾತ್ಮಕ ಅಂಶಗಳ ಬಗ್ಗೆಯೂ ಅಂದಂದಿನ ಸಮಾಜ ತನ್ನದೇ ನಿರೀಕ್ಷೆಗಳನ್ನು ಹೊಂದಿರುವುದಕ್ಕೆ ನಿದರ್ಶನಗಳಿವೆ.
- ಸಮಾಜ ಬೆಳೆದಂತೆ, ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಪ್ರಗತಿಯಾದಂತೆ, ಶಿಕ್ಷಣ ಕ್ಷೇತ್ರದಿಂದ ಸಮಾಜ ಇರಿಸಿಕೊಂಡ ನಿರೀಕ್ಷೆಗಳು ವಿಕಸಿತಗೊಳ್ಳುತ್ತಿವೆ. ಶಿಕ್ಷಕರಾಗುವವರ ವಿದ್ಯಾರ್ಹತೆ ಮತ್ತು ತರಬೇತಿ ಪ್ರಮಾಣದಲ್ಲಿ ಹಂತಹಂತವಾಗಿ ಆದ ಹೆಚ್ಚಳ ವಿವಿಧ ಕಾಲಘಟ್ಟಗಳಲ್ಲಿ ರೂಪಿತವಾದ ಸಮಾಜದ ಪರಿಕಲ್ಪನೆಯ ಭಾಗವೇ ಆಗಿದೆ.
- ಆದರೂ ಶಿಕ್ಷಕರು ಎಂಥವರಾಗಿರಬೇಕು? ಅವರು ಯಾವ ರೀತಿಯ ಕ್ಷಮತೆಯನ್ನು ಹೊಂದಿರಬೇಕು ಎಂಬ ಸಮಾಜದ ನಿರೀಕ್ಷೆಗಳಿಗೂ, ವಾಸ್ತವದಲ್ಲಿ ಶಿಕ್ಷಕರು ಅಂತಹ ನಿರೀಕ್ಷೆಗಳನ್ನು ತಲುಪುವಲ್ಲಿ ಯಾವ ಪ್ರಮಾಣದಲ್ಲಿ ಯಶಸ್ವಿಯಾದರು ಎನ್ನುವ ಸಂಗತಿಗೂ ನಡುವಿನ ಅಂತರ ನಿರಂತರವಾಗಿ ಮುಂದುವರೆದಿರುವುದು ಕಾಲಾತೀತ ಸತ್ಯವಾಗಿದೆ.
- ಇದರರ್ಥ, ಶಿಕ್ಷಕರನ್ನು ರೂಪಿಸುವ ವ್ಯವಸ್ಥೆ ಮತ್ತು ಅದರ ಸಾಂಸ್ಥಿಕ ಸ್ವರೂಪ ಹಾಗೂ ಪ್ರಕ್ರಿಯೆಗಳಲ್ಲಿ ಸುಧಾರಣೆಗಳಾಗಿದ್ದರೂ, ಈ 'ನಿರೀಕ್ಷೆ – ಸಾಧನೆ' ಸಮೀಕರಣದಲ್ಲಿನ ವ್ಯತ್ಯಾಸವನ್ನು ತುಂಬಲು ಶಿಕ್ಷಕ ಶಿಕ್ಷಣ ವ್ಯವಸ್ಥೆಯು ತನ್ನ ಕಾಣ್ಕೆ, ಉದ್ದೇಶಗಳನ್ನು ಮರುರೂಪಿಸಿಕೊಂಡು ತನ್ನ ಪ್ರಸ್ತುತತೆಯನ್ನು ಉಳಿಸಿಕೊಳ್ಳಬೇಕಾಗಿದೆ. ಅಲ್ಲದೆ ತನ್ನ ಮತ್ತು ತನ್ನ ಸದಸ್ಯರ ಸಾಮರ್ಥ್ಯವೃದ್ಧಿಯನ್ನು ನಾವೀನ್ಯಪೂರ್ಣ ನೆಲೆಯಲ್ಲಿ ಪರಿಕಲ್ಪಿಸಿಕೊಳ್ಳಬೇಕಿದೆ.

13–01–2021

ಕೋಷ್ಟಕ 4: 1882–1950ರ ಅವಧಿಯ ಶಿಕ್ಷಕ ಶಿಕ್ಷಣದ ಸಂಕ್ಷಿಪ್ತ ಚಿತ್ರಣ

ಕ್ರ.ಸಂ.	ಆಕರ	ಅಧ್ಯಯನ/ ಲೇಖನದ ಅವಧಿ ಶಿಕ್ಷಕರ	ವಿದ್ಯಾರ್ಹತೆ/ತರಬೇತಿ ಪ್ರಮಾಣ	ವ್ಯಾಖ್ಯೆ
1	ಜ್ಯೋತಿರಾವ್ ಫುಲೆ, ಶಿಕ್ಷಣ ಆಯೋಗಕ್ಕೆ ನೀಡಿದ ಲಿಖಿತ ಹೇಳಿಕೆ.	1882ರ ಅಕ್ಟೋಬರ್	ಬಹುತೇಕ ಶಿಕ್ಷಕರು ಯಾವುದೇ ತರಬೇತಿ ಹೊಂದಿಲ್ಲ. ಕನಿಷ್ಠ ಆರನೇ ತರಗತಿ (ಪ್ರಾದೇಶಿಕ ಭಾಷೆಗಳಲ್ಲಿ) ಹಾಗೂ ನಾರ್ಮಲ್ ಶಾಲೆಯಿಂದ ತೇರ್ಗಡೆ ಹೊಂದಿರಬೇಕು.	ಕೆಲವೇ ಶಿಕ್ಷಕರು ನಾರ್ಮಲ್ ಶಾಲೆಗಳಿಂದ ಹೊರಬಂದಿರುವುದನ್ನು ಗುರುತಿಸಲಾಗಿದೆ.
2	ಡಾ. ಕೆ. ಶಿವರಾಮ ಕಾರಂತ, 'ಚಿಣ್ಣರ ಲೋಕದಲ್ಲಿ ಕಾರಂತರು'	1932	ಪ್ರಾಥಮಿಕ ಹಂತಕ್ಕೆ ಎಂಟನೇ ತರಗತಿ ಹಾಗೂ ಪ್ರೌಢಶಾಲೆ ಹಂತಕ್ಕೆ ಬಿ.ಎ ಆದವರು ಶಿಕ್ಷಕರಾಗಬಹುದೆಂದು ಉಲ್ಲೇಖಿಸಲಾಗಿದೆ.	ಶಿಕ್ಷಕರು ನಿರ್ದಿಷ್ಟ ವಿದ್ಯಾರ್ಹತೆಯನ್ನು ಮೀರಿ ನಿರಂತರ ಕಲಿಕಾರ್ಥಿಯಾಗಿ, ಆದರ್ಶ ವ್ಯಕ್ತಿಯಾಗಿ, ಮಕ್ಕಳೊಂದಿಗೆ ಸಂವೇದನೆಯಿಂದ ಬೆರೆಯಬಲ್ಲವನಾಗಿರಬೇಕೆಂದು ಆಶಿಸಲಾಗಿದೆ.
3	ಅಪರ್ಣಾ ಬಸು ಅವರ ಪ್ರಬಂಧ (ಹಿಸ್ಟರಿ ಆಫ್ ಇಂಡಿಯನ್ ಎಜುಕೇಶನ್)	1936–37	ನಿಗದಿತ ತರಬೇತಿ ಪಡೆದ ಪುರುಷ ಶಿಕ್ಷಕರು ಶೇ.57 ರಷ್ಟು; ಅದರಲ್ಲಿ ಸ್ನಾತಕ ಪದವಿ ಪಡೆದವರ ಪ್ರಮಾಣ ಶೇ.23%.	ಈ ದತ್ತಾಂಶ ಪ್ರೌಢಶಾಲೆ ಶಿಕ್ಷಕರನ್ನೂ ಒಳಗೊಂಡಿದೆ. ಇದರರ್ಥ ಪ್ರಾಥಮಿಕ ಹಂತದಲ್ಲಿ ಇನ್ನೂ ಕಡಿಮೆ ವಿದ್ಯಾರ್ಹತೆ, ಮತ್ತು ತರಬೇತಿ ಹೊಂದಿಲ್ಲದವರ ಪ್ರಮಾಣ ಹೆಚ್ಚಾಗಿರುತ್ತದೆ.
4	ಎಂ.ಆರ್.ಶ್ರೀ, 'ರಂಗಣ್ಣನ ಕನಸಿನ ದಿನಗಳು' ಕೃತಿಯ ಮುನ್ನುಡಿಯಲ್ಲಿ.	1949	ಎಸ್ಸೆಸ್ಸೆಲ್ಸಿ ಹಾಗೂ ಒಂದು ವರ್ಷದ ಟ್ರೈನಿಂಗ್ ಪರೀಕ್ಷೆ ಎರಡರಲ್ಲೂ ತೇರ್ಗಡೆ.	ಶಿಕ್ಷಕ ತರಬೇತಿ ಆಗಿಲ್ಲದವರನ್ನು ಉಪಾಧ್ಯಾಯರಾಗಿ ನೇಮಿಸುತ್ತಿದ್ದುದನ್ನು ಕಂಡು, ಜಿಲ್ಲೆಗಳಲ್ಲಿ ನಾರ್ಮಲ್ ಸ್ಕೂಲುಗಳ ಸ್ಥಾಪನೆ ಮಾಡಿ ಎಸ್ಸೆಸ್ಸೆಲ್ಸಿ ಆದವರಿಗೆ ಅಂತಹ ಶಾಲೆಗಳಿಗೆ ಸೇರಲು ಸ್ಕಾಲರ್ಶಿಪ್ ನೀಡಲು ಸಲಹೆ ನೀಡಲಾಗಿದೆ.